ದಿನಾಂಕಃ 13.06.2024 ರಂದು ಪ್ರಮಾಣ ವಚನ ಭೋದಿಸಲಾಯಿತುಃ

**ಮುಂದುವದರಿ ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಕೆ.ಆರ್.ವಿ. ವಕೀಲರಿಂದ ಃ**

1962ರಲ್ಲಿ ನನ್ನ ತಂದೆ ಅರಳ್ಳಿ ವೆಂಕಟೇಗೌಡರಿಂದ ಆಲಂಬಾಡಿ ಗ್ರಾಮಕ್ಕೆ ಸೇರಿದ ಕೆಲವು ಸ್ವತ್ತುಗಳನ್ನು ಕೊಂಡುಕೊಂಡಿರುತ್ತಾರೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರಿದು ಆಸ್ತಿಗಳನ್ನು ಕೊಂಡುಕೊಂಡಿರುವುದಿಲ್ಲ, ಅಡವಿಟ್ಟು ಮತ್ತೆ ಮರಳಿ ಪಡೆದಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಸ್ವತ್ತುಗಳನ್ನು ಯಾವಾಗ ಅಡವಿಟ್ಟಿದ್ದರು ಎಂದು ಗೊತ್ತಿಲ್ಲ. ಸಾಕ್ಷಿಗೆ ಈಗ ಒಂದು ಕ್ರಯ ಪತ್ರದ ದೃ. ನಕಲನ್ನು ತೋರಿಸಲಾಗಿ, ಅದರಲ್ಲಿರುವ ಅಲಂಬಾಡಿ ಗ್ರಾಮದಲ್ಲಿರುವ ಕ್ವಾಟೆ ಸುಬ್ಬೇಗೌಡರ ಮೈನರ್ ಮಗ 6 ವರುಷದ ತಿಮ್ಮರಾಯಪ್ಪ ಮತ್ತು ಈ ಹುಡುಗನ ಮೈನರ್ ಗಾರ್ಡಿಯನ್ ಆಗಿ ತಾಯಿ ಸುಮಾರು 40 ವರುಷದ ಮುನಿಯಮ್ಮ ಎಂದರೆ ನಮ್ಮ ಅಜ್ಜಿ ಮತ್ತು ತಂದೆಯಾಗಿರುತ್ತಾರೆ ಎಂದು ಸಾಕ್ಷಿ ಒಪ್ಪಿಕೊಂಡಿದ್ದರಿಂದ ಸದರಿ ಕ್ರಯ ಪತ್ರದ ದೃ. ನಕಲನ್ನು ಪ್ರತಿವಾದಿ ವಕೀಲರ ವಿನಂತಿಯ ಮೇರೆಗೆ ಕನ್‌ಫ್ರಂಟ್ ಆಗಿ ನಿಡಿ-4 ಎಂದು ಗುರುತಿಸಲಾಯಿತು. ನನ್ನ ತಾತ ಸುಬ್ಬೇಗೌಡರವರು ಯಾವಾಗ ತೀರಿ ಹೋಗಿರುತ್ತಾರೆ ಎಂದು ಗೊತ್ತಿಲ್ಲ, ದಾವಾ ಸ್ವತ್ತುಗಳಿಗೆ ಸಂಬಂಧಿಸಿದಂತೆ ಈ ದಾವೆಯನ್ನು ಸಲ್ಲಿಸಿದ ನಂತರ ಪವತಿ ಖಾತೆಗಾಗಿ ನಾವು ಅರ್ಜಿಯನ್ನು ನಾಡ ಕಚೇರಿಗೆ ಸಲ್ಲಿಸಿದ್ದೆವು ಎಂದರೆ ಸರಿ. ನಾವು ಅರ್ಜಿ ಸಲ್ಲಿಸುವಾಗ ಅರ್ಜಿ ಜೊತೆ ಪಹಣಿ, ಮ್ಯುಟೇಶನ್, ವಂಶವೃಕ್ಷ ದಾಖಲೆಗಳನ್ನು ಸಲ್ಲಿಸಿದ್ದೆವು. ಅರ್ಜಿಯ ಜೊತೆ ನಾವು ನನ್ನ ತಾತನ ಮರಣ

ಪ್ರಮಾಣ ಪತ್ರವನ್ನು ಸಲ್ಲಿಸಿದ್ದೆವು. ಸಾಕ್ಷಿಗೆ ಈಗ ಒಂದು ಪ್ರಮಾಣ ಪತ್ರದ ದೃ. ನಕಲನ್ನು ತೋರಿಸಲಾಗಿ, ಅದು ತಾವು ನಾಡ ಕಚೇರಿಗೆ ಸಲ್ಲಿಸಲಾದ ದಾಖಲೆ ಎಂದು ಒಪ್ಪಿಕೊಳ್ಳುತ್ತಾರೆ, ಸದರಿ ದಾಖಲೆಯನ್ನು ಕನ್‌ಫ್ರಂಟ್ ಆಗಿ ನಿಡಿ-5 ಎಂದು ಗುರುತಿಸಲಾಯಿತು. ನಿಡಿ-5ರಂತೆ ನನ್ನ ತಾತ 1953ರಲ್ಲಿ ಮೃತಪಟ್ಟಿರುವ ಬಗ್ಗೆ ನಮೂದು ಆಗಿರುತ್ತದೆ. ನಿಡಿ-4ರ ಪ್ರಕಾರ 1946ರಲ್ಲಿ ನನ್ನ ತಾತ ಪವತಿಯಾಗಿರುತ್ತಾರೆ, ಆದರೆ ನಿಡಿ-5ರಲ್ಲಿ ನನ್ನ ತಾತ 1953ರಲ್ಲಿ ಮೃತಪಟ್ಟಿರುತ್ತಾರೆ ಎಂದು ಸುಳ್ಳು ಪ್ರಮಾಣ ಪತ್ರವನ್ನು ನಾಡ ಕಚೇರಿಗೆ ಸಲ್ಲಿಸಿದ್ದೆವು ಎಂದರೆ ಸರಿಯಲ್ಲ, ಸಾಕ್ಷಿಗೆ ಈಗ 6 ಪಹಣಿಗಳ ದೃ. ನಕಲನ್ನು ತೋರಿಸಲಾಗಿ, ಅವು ದಾವಾ ಸ್ವತ್ತು ಐಟಂ ನಂ.1ಕ್ಕೆ ಸಂಬಂಧಿಸಿದ ಪಹಣಿಗಳು ಎಂದು ಒಪ್ಪಿಕೊಳ್ಳುತ್ತಾರೆ, ಸದರಿ 6 ಪಹಣಿ ಪತ್ರಗಳನ್ನು ಒಟ್ಟಾಗಿ ನಿಡಿ-6 ಎಂದು ಗುರುತಿಸಲಾಯಿತು. ನಿಡಿ-6 ಪಹಣಿ ಪತ್ರಗಳ ಕಾಲಂ ನಂ.2ರಲ್ಲಿ ಮೂಗಪ್ಪ ಬಿನ್ ಹೊಟ್ಟೆಪ್ಪ- 2ನೇ ಪ್ರತಿವಾದಿಯ ಹೆಸರು ನಮೂದು ಆಗಿರುತ್ತದೆ ಎಂದರೆ ಸರಿ. ನಿಡಿ-6ರಲ್ಲಿ ನಮೂದು ಆಗಿರುವ ದೊಡ್ಡ ಪೆದ್ದಪ್ಪಯ್ಯ ಬಿನ್ ಹೊಟ್ಟೆಪ್ಪ ಎಂದರೆ 7 ಮತ್ತು 8ನೇ ಪ್ರತಿವಾದಿಗಳ ತಂದೆ ಎಂದರೆ ಗೊತ್ತಿಲ್ಲ, ನಿಡಿ-6ರಲ್ಲಿ ನಮೂದು ಆಗಿರುವ ಚಿಕ್ಕಬಪ್ಪ ಈ ದಾವೆಯ 1ನೇ ಪ್ರತಿವಾದಿ ಎಂದರೆ ಸರಿ. ಈ ದಾವ ಸ್ವತ್ತಿಗೆ ಸಂಬಂಧಿಸಿದಂತೆ ಹಳೆ ಪಹಣಿ ಪತ್ರಿಕೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ, ದಾವಾ ಸ್ವತ್ತಿನ ಹಳೆ ಪಹಣಿ ಪತ್ರಿಕೆಗಳಲ್ಲಿ ಪ್ರತಿವಾದಿಗಳ ಹೆಸರು ನಮೂದು ಆಗಿದ್ದು , ಅವುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದರೆ ನಿಜಸ್ಥಿತಿ ತಿಳಿಯುತ್ತದೆ ಎಂದು ನಾನು ಉದ್ದೇಶಪೂರ್ವಕವಾಗಿ

ನ್ಯಾಯೊಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಈ ದಾವೆಯ ನಾವು 6 ಜನ ವಾದಿಯರು ಒಟ್ಟಾಗಿ ಇರುತ್ತೇವೆ. ನಮ್ಮ ತಂದೆಯ ಕುಟುಂಬದಲ್ಲಿ ನಾವು ವಿಭಾಗವನ್ನು ಮಾಡಿಕೊಂಡಿರುತ್ತೇವೆ. ಯಾವ ದಿನಾಂಕದಂದು ವಿಭಾಗ ಮಾಡಿಕೊಂಡಿರುತ್ತೇವೆ ಎಂದು ನೆನಪಿಲ್ಲ. ಸಾಕ್ಷಿಗೆ ವಿಭಾಗ ಪತ್ರದ ದೃ. ನಕಲನ್ನು ತೋರಿಸಲಾಗಿ, ಅದು ನನ್ನ ಕುಟುಂಬದಲ್ಲಿ ಆದ ವಿಭಾಗ ಪತ್ರ ಎಂದು ಒಪ್ಪಿಕೊಳ್ಳುತ್ತಾರೆ, ಸದರಿ ಪತ್ರವನ್ನು ನಿಡಿ-7 ಎಂದು ಗುರುತಿಸಲಾಯಿತು. ನಿಡಿ-7 ವಿಭಾಗ ಪತ್ರ ಆದ ನಂತರ ನಾವು ನಮ್ಮ ಕುಟುಂಬದಲ್ಲಿ ಪ್ರತ್ಯೇಕವಾಗಿ ವಾಸವಾಗಿರುತ್ತೇವೆ ಎಂದರೆ ಸರಿ. ನಿಡಿ-7ರಂತೆ ನಮ್ಮ ಕುಟುಂಬದಲ್ಲಿ ಸ್ವತ್ತುಗಳ ವಿಭಾಗ ಆಗಿರುವುದಿಲ್ಲ ಎಂದರೆ ಸರಿ, ಸಾಕ್ಷಿ ಮುಂದುವರಿದು ಸ್ವತ್ತುಗಳು ಪೋಡಿಯಾಗದೇ ಇದ್ದುದ್ದರಿಂದ ನಿಡಿ-7ರಂತೆ ವಿಭಾಗ ಆಗಿರುವುದಿಲ್ಲ ಎಂದು ಹೇಳುತ್ತಾರೆ. ನಾನು 2 ಆಸ್ತಿಗಳಿಗೆ ಸಂಬಂಧಿಸಿದಂತೆ ಈ ದಾವೆಯನ್ನು ಸಲ್ಲಿಸಿರುತ್ತೇನೆ. ದಾವಾ ಸ್ವತ್ತುಗಳಲ್ಲಿ 77/ಪಿ2 ಹಾಗೂ ಸ.ನಂ. 58 ಆಗಿರುತ್ತವೆ. ದಾವಾ ಸ್ವತ್ತುಗಳಲ್ಲಿ ಐಟಂ ನಂ.1 ಪೋಡಿಯಾಗಿರುವುದಿಲ್ಲ, ಐಟಂ ನಂ.2 ಪೋಡಿಯಾಗಿರುತ್ತದೆ. ದಾವಾ ಸ.ನಂ 58ರಲ್ಲಿ ಕೇವಲ 2 ಗುಂಟೆ ಜಮೀನು ಇರುವುದರಿಂದ ನಮ್ಮ ಕುಟುಂಬದ 5 ಜನರ ಮದ್ಯೆ ವಿಭಾಗ ಮಾಡಲು ಆಗದೇ ಇರುವುದರಿಂದ ಅದನ್ನು ವಿಭಾಗ ಮಾಡಿಕೊಂಡಿರುವುದಿಲ್ಲ. ಐಟಂ ನಂ.1 ಸ. ನಂ. 87 ಪೋಡಿಗಾಗಿ ಬಾಕಿ ಇರುವುದರಿಂದ ಅದು ಕೂಡ ನಮ್ಮ ಕುಟುಂಬದಲ್ಲಿ ವಿಭಾಗ ಮಾಡಿಕೊಂಡಿರುವುದಿಲ್ಲ. ದಾವಾ ಸ್ವತ್ತುಗಳು ನಮ್ಮ ಕುಟುಂಬಕ್ಕೆ ಸಂಬಂ ಧಿಸದೇ ಇರುವುದರಿಂದ ಅವು ನಿಡಿ-7ರಲ್ಲಿ ನಾವು ವಿಭಾಗ

ಮಾಡಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಸ.ನಂ. 122 ನಮ್ಮ ಕುಟುಂಬಕ್ಕೆ ಸಂಬಂಧಿಸಿರುವುದಿಲ್ಲ. ನಿಡಿ-7ರಂತೆ ಸ.ನಂ.122ರಲ್ಲಿ ನಮ್ಮ ಕುಟುಂಬಕ್ಕೆ 13 ಗುಂಟೆ ಜಮೀನು ಇರುತ್ತದೆ ಎಂದರೆ ಸರಿ. ಸಾಕ್ಷಿಗೆ ಈಗ ಸ.ನಂ.122ರ ಹಿಸ್ಸ ದಾಖಲೆಯನ್ನು ತೋರಿಸಲಾಗಿ, ಅದು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಸದರಿ ದಾಖಲೆಯಲ್ಲಿ ಸ.ನಂ 122/2ರಲ್ಲಿ 13 ಗುಂಟೆ ಜಮೀನು ಸುಬ್ಬಪ್ಪ ಬಿನ್ ನಂಜಪ್ಪರವರ ಹೆಸರಿಗೆ ಇರುತ್ತದೆ ಎಂದರೆ ಸರಿಯಲ್ಲ. ಸದರಿ ಸುಬ್ಬಪ್ಪ ಬಿನ್ ನಂಜಪ್ಪ ನನ್ನ ತಾತ ಎಂದರೆ ಸುಳ್ಳು. ಸ.ನಂ.73/2ರಲ್ಲಿ ನಮ್ಮ ಕುಟುಂಬಕ್ಕೆ 39 ಗುಂಟೆ ಜಮೀನು ಇರುತ್ತದೆ. ನಿಡಿ-7ರಲ್ಲಿ ಸ.ನಂ. 73/2ರ ಜಮೀನನ್ನು ನಾವು ಕುಟುಂಬದಲ್ಲಿ ವಿಭಾಗ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ಸದರಿ ಸ.ನಂ. 73/2ರಲ್ಲಿ 39 ಗುಂಟೆ ಜಮೀನು ಸುಬ್ಬಪ್ಪ ಬಿನ್ ನಂಜಪ್ಪರವರ ಹೆಸರಿಗೆ ಇರುತ್ತದೆ ಎಂದರೆ ಸುಳ್ಳು. ಸುಬ್ಬಪ್ಪ ಬಿನ್ ನಂಜಪ್ಪ ನನ್ನ ತಾತ ಇಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸ.ನಂ.75/2ರಲ್ಲಿ 21 ಗುಂಟೆ ಜಮೀನು ನಮ್ಮ ಕುಟುಂಬಕ್ಕೆ ಇರುತ್ತದೆ ಎಂದರೆ ಸರಿ. ಸದರಿ ಸ.ನಂ. 75/2ರ 21 ಗುಂಟೆ ಜಮೀನಿನ ಸರ್ವೆ ದಾಖಲೆಯಲ್ಲಿ ಸುಬ್ಬಪ್ಪ ಬಿನ್ ನಂಜಪ್ಪರವರ ಹೆಸರು ನಮೂದು ಆಗಿರುತ್ತದೆ ಎಂದರೆ ಸುಳ್ಳು. ಸ.ನಂ. 179/1ರಲ್ಲಿ ನಮ್ಮ ಕುಟುಂಬದ 1 ಎಕರೆ 39 ಗುಂಟೆ ಜಮೀನು ಇರುತ್ತದೆ. ಸದರಿ ಜಮೀನು ನನ್ನ ತಾತ ಸುಬ್ಬಪ್ಪ ಬಿನ್ ನಂಜಪ್ಪರವರ ಹೆಸರಿಗೆ ದಾಖಲಾಗಿರುತ್ತದೆ ಎಂದರೆ ಸುಳ್ಳು. ನನ್ನ ತಾತನ ತಂದೆಯ ಹೆಸರು ನಂಜಪ್ಪ ಆಗಿರುತ್ತದೆ, ಆದರೆ ನಾನು ಈ ದಾವೆಯಲ್ಲಿ ನನ್ನ ತಾತನ ತಂದೆಯ ಹೆಸರು ತಿಮ್ಮರಾಯಗೌಡ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ

ಸರಿಯಲ್ಲ. ನಮ್ಮ ಕುಟುಂಬಕ್ಕೆ ಸೇರಿದ ಎಲ್ಲಾ ಆಸ್ತಿಗಳ ದಾಖಲೆಗಳಲ್ಲಿ ತಾತನ ತಂದೆಯ ಹೆಸರು ನಂಜಪ್ಪ ಎಂದು ನಮೂದು ಆಗಿದ್ದು ನಾನು ತಿಮ್ಮರಾಯಗೌಡ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವಾ ಸ.ನಂ. 87 ಗೋಮಾಳ ಜಮೀನು ಎಂದರೆ ಸರಿಯಲ್ಲ. ದಾವಾ ಸ.ನಂ.87 ಒಟ್ಟು ವಿಸ್ತೀರ್ಣ ಮೂಲತಃವಾಗಿ ಎಷ್ಟು ಎಂದು ನನಗೆ ಗೊತ್ತಿಲ್ಲ. ಸ. ನಂ.87ರಲ್ಲಿ ಸರಕಾರದಿಂದ ಸಾಕಷ್ಟು ಜನರಿಗೆ ಮಂಜೂರಾಗಿರುತ್ತದೆ ಎಂದರೆ ಸರಿ. ದಾವಾ ಶೆಡ್ಯೂಲ್ 1ರ ಆಸ್ತಿಯ ವಿಸ್ತೀರ್ಣ 4 ಎಕರೆಯಾಗಿದ್ದು, ಅದರ ಚಕ್ಕುಬಂಧಿ ಪೂ-ಜೋನ್ಸ್‌ಫಾದರ್, ಪ-ಕೃಷ್ಣಪ್ಪ , ಉ-ರಸ್ತೆ ಮತ್ತು ನಂಜಪ್ಪ ಮತ್ತು ದ-ನಂಜಪ್ಪ ಇರುತ್ತಾರೆ. ದಾವಾ ಶೆಡ್ಯೂಲ್ 1ನೇ ಆಸ್ತಿಯ ದಕ್ಷಿಣಕ್ಕೆ ನಾಗಪ್ಪರವರ ಜಮೀನು ಎಂದರೆ ಸುಳ್ಳು. ನಾನು ಆಲಂಬಾಡಿ ಗ್ರಾಮದ ನಾಗಪ್ಪರವರನ್ನು ನೋಡಿರುತ್ತೇನೆ. ಸದರಿ ನಾಗಪ್ಪರವರಿಗೆ ಸ.ನಂ.87ರಲ್ಲಿ ಜಮೀನು ಇರುವ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಪೂರ್ವಕ್ಕೆ ಜೋನ್ಸ್‌ಫಾದರ್‌ರವರಿಗೆ ಇರುವ ಆಸ್ತಿ ಅವರು ಕೊಂಡಿರುವ ಆಸ್ತಿ, ಅದು ಮಂಜೂರು ಆಗಿರುವುದಿಲ್ಲ. ಜೋನ್ಸ್ ಫಾದರ್ ಯೂರಿಂದ ಆಸ್ತಿ ಖರೀದಿಸಿರುತ್ತಾರೆ ಎಂದು ಗೊತ್ತಿಲ್ಲ. ಕೃಷ್ಣಪ್ಪರವರ ಆಸ್ತಿ ಸ.ನಂ. ನನಗೆ ಹೇಳಲು ಬರುವುದಿಲ್ಲ. ಸದರಿ ಕೃಷ್ಣಪ್ಪನಿಗೆ ಆಸ್ತಿ ಹೇಗೆ ಬಂ ದಿರುತ್ತದೆ ಎಂದು ಗೊತ್ತಿಲ್ಲ. ದಾವಾ ಸ್ವತ್ತು ಶೆಡ್ಯೂಲ್ 1ರ ಉತ್ತರ ದಿಕ್ಕಿಗೆ ಇರುವ ನಂಜಪ್ಪರವರು ಕೊಂಡಿರುವ ಆಸ್ತಿ ಎಂದರೆ ಸರಿ. ಅವರು ಯಾರಿಂದ ಖರೀದಿ ಮಾಡಿರುತ್ತಾರೆ ಎಂದು ಗೊತ್ತಿಲ್ಲ. ದಕ್ಷಿಣಕ್ಕೆ ಇರುವ ಆಸ್ತಿಯ ಸ.ನಂ. ನನಗೆ ಗೊತ್ತಿಲ್ಲ. ಅದು ನಾಗಪ್ಪರವರಿಗೆ ಮಂಜೂರು ಆಗಿರುವ ಜಮೀನು

ಎಂದರೆ ಗೊತ್ತಿಲ್ಲ. ನಂಜಪ್ಪ ಸದರಿ ಉತ್ತರ ದಿಕ್ಕಿಗೆ ಇರುವ ಜಮೀನನ್ನು ಸಾಲೇ ರಾಮಯ್ಯರವರ ಮಗ ರಾಮಕೃಷ್ಣಪ್ಪರವರಿಂದ ಕೊಂಡಿರುವ ಆಸ್ತಿ ಎಂದರೆ ಗೊತ್ತಿಲ್ಲ. ಸಾಲೇ ರಾಮಯ್ಯರವರ ಮಗ ರಾಮಕೃಷ್ಣಪ್ಪರವರು ನಮ್ಮ ಗ್ರಾಮಕ್ಕೆ ಸೇರಿದವರು ಎಂದರೆ ಸರಿಯಲ್ಲ. ಸದರಿ ರಾಮಕೃಷ್ಣಪ್ಪರವರಿಗೆ ದಾವಾ ಸ.ನಂ.87ರ ಉತ್ತರ ದಿಕ್ಕಿನಲ್ಲಿರುವ 2 ಎಕರೆ ಜಮೀನು ಸರಕಾರದಿಂದ ಮಂಜೂರು ಆಗಿರುತ್ತದೆ ಎಂದರೆ ಸುಳ್ಳು. ಅವರಿಗೆ ಸರಕಾರದಿಂದ ಸಾಗುವಳಿ ಚೀಟಿಯನ್ನು ನೀಡಿರುತ್ತಾರೆ ಎಂದರೆ ಸುಳ್ಳು. ಸಾಗುವಳಿ ಚೀಟಿಯಲ್ಲಿ ರಾಮಕೃಷ್ಣಪ್ಪರವರಿಗೆ ಮಂಜೂರಾದ ಜಮೀನಿನ ದಕ್ಷಿಣ ದಿಕ್ಕಿಗೆ 2, 7 ಮತ್ತು 8ನೇ ಪ್ರತಿವಾದಿಯ ತಂದೆಯ ಹೆಸರು ನಮೂದು ಆಗಿರುತ್ತದೆ ಎಂದರೆ ಸುಳ್ಳು.

**ಮುಂದುವರಿದ ಪಾಟೀ ಸವಾಲನ್ನು ಕೋರಿಕೆ ಮೇರೆಗೆ ಮುಂದೂಡಲಾಗಿದೆಃ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಗಿದೆ.)**

ಓ.ಹೇ ಕೇ ಸರಿ ಇದೆ.

ಸಹಿ/-

**(ದಯಾನಂದ)**
ಹಿರಿಯ ಸಿವಿಲ್ ನ್ಯಾಯಾಧೀಶರು,
ಮಾಲೂರು.